ಅಸಲುದಾವಾ ಸಂಖ್ಯೆ **57/2022**
**ಪಿ.ಡಬ್ಲ್ಯೂ.2**

ಇಂದು ದಿನಾಂಕ **05-09-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ</u>**

ಇಂದು ನಾನು ನ್ಯಾಯಾಲಯಕ್ಕೆ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಹಾಗೂ ಸಂಗತಿಗಳು ನಿಜವಿರುತ್ತವೆ.

ಸಾಕ್ಷಿ ಮುಂದುವರೆದು ನಾನು ಈಗ ನೋಡುತ್ತಿರುವ ನಿಪಿ 4 ರಲ್ಲಿರುವ ಮೃತ್ಯು ಪತ್ರ ಯಲ್ಲವ್ವ ಬರೆದುಕೊಟ್ಟ ಮೃತ್ಯು ಪತ್ರ ವಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಯಲ್ಲವ್ವ ಸದರೀ ಮೃತ್ಯು ಪತ್ರ ಕ್ಕೆ ತನ್ನ ಹೆಬ್ಬಟ್ಟಿನ ಗುರುತುಗಳನ್ನು ಹಾಕಿದ್ದು ನಿಪಿ 4 ರಲ್ಲಿ ಅವಳ ಹೆಬ್ಬಟ್ಟಿ ಗುರುತುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ನನ್ನಂತೆ ಮೃತ್ಯು ಪತ್ರ ಕ್ಕೆ ಸಾಕ್ಷಿದಾರರಾಗಿ ಯಲ್ಲಪ್ಪ, ಮಂಜು ಮತ್ತು ಲಕ್ಷ್ಮಣ ಸಹಿಗಳನ್ನು ಮಾಡಿರುತ್ತಾರೆ.

**(ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ